ದೂರವಾಣಿ ಸಂಖ್ಯೆ : 2419677/2419361
ಫ್ಯಾಕ್ಸ್: 0821-2419363/2419301

e-mail : registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005

## ಪರಿಷ್ಕೃತ ಅಧಿಸೂಚನೆ- 3

**ವಿಷಯ:** 2022-23ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿ ಪ್ರೋಗ್ರಾಂಗಳ ತರಗತಿ/ಪರೀಕ್ಷೆಗಳನ್ನು ಮುಂದೂಡಿರುವ ಬಗ್ಗೆ.

**ಉಲ್ಲೇಖ:** 1. ಈ ಕಛೇರಿ ಇದೇ ಸಮ ಸಂಖ್ಯೆ ಪರಿಷ್ಕೃತ ಅಧಿಸೂಚನೆ ದಿನಾಂಕ:28.02.2023.
2. ಈ ಕಛೇರಿ ಇದೆ ಸಮ ಸಂಖ್ಯೆ ಪರಿಷ್ಕೃತ ಅಧಿಸೂಚನೆ-2 ದಿನಾಂಕ: 20.05.2023.
3. ಕುಲಸಚಿವರು(ಪರೀಕ್ಷಾಂಗ) ರವರ ಪತ್ರಸಂಖ್ಯೆ:ಪ.ವಿ.8.6/17ಎ/ಇತರೆ/2019-20 ದಿನಾಂಕ: 20.07.2023.
4. ದಿನಾಂಕ: 20.07.2023ರಂದು ನಡೆದ ಶೈಕ್ಷಣಿಕ ವೇಳಾಪಟ್ಟಿ ರಚನೆ ಸಮಿತಿ ಸಭೆಯ ನಿರ್ಣಯ.

*******

**ಪ್ರಸ್ತಾವನೆ:-**

ಉಲ್ಲೇಖಿತ (1)ರ ಈ ಕಛೇರಿ ಅಧಿಸೂಚನೆಯಲ್ಲಿ ಸ್ನಾತಕ ಪ್ರೋಗ್ರಾಂಗಳ 2, 4 ಮತ್ತು 6ನೇ ಸೆಮಿಸ್ಟರ್ ತರಗತಿಗಳ ಕೊನೆ ದಿನಾಂಕ: 05.08.2023ಕ್ಕೆ ನಿಗಧಿಪಡಿಸಲಾಗಿತ್ತು. 2023-24ನೇ ಶೈಕ್ಷಣಿಕ ಸಾಲಿನಿಂದ ಸರ್ಕಾರದ ಶೈಕ್ಷಣಿಕ ವೇಳಾಪಟ್ಟಿಯನ್ನು ಅನುಸರಿಸಲು ಮತ್ತು ಸ್ನಾತಕೋತ್ತರ ಪ್ರೋಗ್ರಾಂಗಳ ಪ್ರಥಮ ಹಾಗೂ ದ್ವಿತೀಯ ವರ್ಷದ ತರಗತಿಗಳನ್ನು ಒಂದೇ ಸಮಯದಲ್ಲಿ ಪ್ರಾರಂಭಿಸಲು, ಸ್ನಾತಕ ಕಾಲೇಜಿನ ಪ್ರಾಂಶುಪಾಲರುಗಳ ಒಪ್ಪಿಗೆ ಪಡೆದು, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಈ ಹಿಂದೆ ನಿಗಧಿಪಡಿಸಿದ್ದ ತರಗತಿಗಳ ಅವಧಿಯನ್ನು ಕಡಿತಗೊಳಿಸಿ, ದಿನಾಂಕ: 22.07.2022 ಕ್ಕೆ ನಿಗಧಿಪಡಿಸಿ ಉಲ್ಲೇಖಿತ(2) ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಅದರಂತೆ, ಪರೀಕ್ಷೆಗಳು ದಿನಾಂಕ 24.07.2023 ರಿಂದ ಪ್ರಾರಂಭಿಸಲು ಉದ್ದೇಶಿಸಲಾಗಿತ್ತು.

ಈ ಮಧ್ಯೆ ದಿನಾಂಕ 17.07.2023 ರಂದು ಮತ್ತು ದಿನಾಂಕ: 20.07.2023 ರಂದು ವಿದ್ಯಾರ್ಥಿ ಸಂಘಟನೆಗಳು ತರಗತಿಗಳ ಕೊನೆ ದಿನಾಂಕವನ್ನು 15 ದಿನಗಳ ಕಾಲ ಮುಂದೂಡಲು ಅಗ್ರಹಿಸಿ, ಪ್ರತಿಭಟನೆ ನಡೆಸಿದ್ದರಿಂದ ಮತ್ತು ಕುಲಸಚಿವ(ಪರೀಕ್ಷಾಂಗ) ರವರು ಒಂದು ವಾರದ ಮಟ್ಟಿಗೆ ಪರೀಕ್ಷೆಗಳನ್ನು ಮುಂದೂಡಬಹುದೆಂದು ತಿಳಿಸಿರುವುದರಿಂದ (ಉಲ್ಲೇಖ-3) ವಿಶ್ವವಿದ್ಯಾನಿಲಯದ ಶೈಕ್ಷಣಿಕ ವೇಳಾಪಟ್ಟಿ ರಚನಾ ಸಮಿತಿ ಸಭೆಯನ್ನು ದಿನಾಂಕ: 20.07.2023 ರಂದು ಸಭೆ ಕರೆದು, ವಿದ್ಯಾರ್ಥಿಗಳ ಬೇಡಿಕೆ ಮತ್ತು ಕುಲಸಚಿವ (ಪರೀಕ್ಷಾಂಗ) ರವರು ನೀಡಿರುವ ಅಭಿಪ್ರಾಯದ ಮೇಲೆ ಚರ್ಚಿಸಿ, ಸದರಿ ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಕಾಲೇಜುಗಳ ಪ್ರಾಂಶುಪಾಲರುಗಳು UUCMS Portalನಲ್ಲಿ IA ಅಂಕಗಳು ಮತ್ತು Practical Batch ನ್ನು ಮಾಡಲು ತಾಂತ್ರಿಕ ತೊಂದರೆ ಇರುವುದಾಗಿ ತಿಳಿಸಿ, ಒಂದು ವಾರಗಳ ಕಾಲ ತರಗತಿಗಳ ಕೊನೆ ದಿನಾಂಕವನ್ನು ವಿಸ್ತರಿಸಬೇಕೆಂದು ತಿಳಿಸಿರುವುದಕ್ಕೆ ವಿಶ್ವವಿದ್ಯಾನಿಲಯದ ವಿವಿಧ ನಿಕಾಯಗಳ ಡೀನರುಗಳು ಮತ್ತು ಪ್ರಾಧ್ಯಾಪಕರುಗಳು ಸಮ್ಮತಿಸಿರುತ್ತಾರೆ. ಈ ಕಾರಣದಿಂದಾಗಿ ಶೈಕ್ಷಣಿಕ ಚಟುವಟಿಕೆಗಳು ಸುಲಲಿತವಾಗಿ ಜರುಗಬೇಕೆನ್ನುವ ಉದ್ದೇಶದಿಂದ ಈಗಾಗಲೇ ನಿಗಧಿಪಡಿಸಿದ್ದ 2, 4 ಮತ್ತು 6ನೇ ಸೆಮಿಸ್ಟರ್‌ಗಳ ತರಗತಿಗಳ ಕೊನೆ ದಿನಾಂಕ: 22.07.2023ರ ಬದಲು ದಿನಾಂಕ: 28.07.2023ಕ್ಕೆ ವಿಸ್ತರಿಸಲು ಹಾಗೂ ಪರೀಕ್ಷೆಗಳನ್ನು ದಿನಾಂಕ: 01.08.2023 ರಿಂದ ಪ್ರಾರಂಭಿಸಿ, ದಿನಾಂಕ: 30.08.2023ಕ್ಕೆ ಪೂರ್ಣಗೊಳಿಸಲು ಮತ್ತು ದಿನಾಂಕ: 31.08.2023 ಕ್ಕೆ 2023-24ನೇ ಶೈಕ್ಷಣಿಕ ಸಾಲಿನ 1, 3 ಮತ್ತು 5ನೇ ಸೆಮಿಸ್ಟರ್‌ಗಳ ತರಗತಿಗಳನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ;

**ಆದೇಶ ಸಂಖ್ಯೆ:ಎಸಿ7(ಎ)/456/2016-17, ದಿನಾಂಕ: 20ನೇ ಜುಲೈ,2023.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, 2022-23ನೇ ಶೈಕ್ಷಣಿಕ ಸಾಲಿನ 2,4 ಮತ್ತು 6ನೇ ಸೆಮಿಸ್ಟರ್‌ಗಳ ಕೊನೆಯ ದಿನಾಂಕ: 22.07.2023ರ ಬದಲು ದಿನಾಂಕ: 28.07.2023ಕ್ಕೆ ವಿಸ್ತರಿಸಲಾಗಿದೆ.

ಪರೀಕ್ಷೆಗಳನ್ನು ದಿನಾಂಕ: 01.08.2023ರಿಂದ ಪ್ರಾರಂಭಿಸಲಾಗುವುದು.

2023-24ನೇ ಶೈಕ್ಷಣಿಕ ಸಾಲಿನ 1, 3 ಮತ್ತು 5ನೇ ಸೆಮಿಸ್ಟರ್‌ಗಳ ತರತಿಗಳನ್ನು ದಿನಾಂಕ: 31.08.2023ರಿಂದ ಪ್ರಾರಂಭಿಸಲಾಗುವುದು.

ಸದರಿ ಬದಲಾವಣೆಯನ್ನು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳು ವಿದ್ಯಾರ್ಥಿಗಳ ಗಮನಕ್ಕೆ ತಂದು, ಮುಂದಿನ ಕ್ರಮ ವಹಿಸುವುದು.

ಕುಲಸಚಿವ
ಕುಲಸಚಿವ,
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.
20/7/2023

**ಇವರಿಗೆ:**

1. ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ/ಮಾನ್ಯತೆ ಪಡೆದ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ/ಘಟಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

CamScanner

2. ಸ್ನಾತಕ ಪದವಿ ಕೋರ್ಸುಗಳನ್ನು ನಡೆಸುತ್ತಿರುವ ಎಲ್ಲಾ ಖಾಸಗಿ/ಸರ್ಕಾರಿ/ಸ್ವಾಯತ್ತ ಕಾಲೇಜುಗಳ ಪ್ರಾಂಶುಪಾಲರುಗಳು.
3. ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. – ಪರಿಷ್ಕೃತ ಪರೀಕ್ಷಾ ವೇಳಾಪಟ್ಟಿಯನ್ನು ಪ್ರಕಟಿಸುವುದು.
4. ಎಲ್ಲಾ ನಿಕಾಯದ ಡೀನರುಗಳು, ಮಾನಸಗಂಗೋತ್ರಿ, ಮೈಸೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ರಸ್ತೆ ಬೆಂಗಳೂರು.
6. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಪ್ಯಾಲೇಸ್ ರಸ್ತೆ, ಬೆಂಗಳೂರು.
7. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಆಡಳಿತಾಧಿಕಾರಿಗಳು, ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು.
9. ನಿರ್ದೇಶಕರು, ಪಿ.ಎಂ.ಇ.ಬಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
10. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯ ಭವನ, ಮಾನಸಗಂಗೋತ್ರಿ, ಮೈಸೂರು.
11. ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
12. ನಿರ್ದೇಶಕರು, ಕೊಲಿಜಿಯಟ್ ಎಜುಕೇಷನ್, ಕರ್ನಾಟಕ ಸರ್ಕಾರ, ಬೆಂಗಳೂರು.
13. ನಿರ್ದೇಶಕರು, ಪ್ರೀ–ಯುನಿವರ್ಸಿಟಿ ಎಜುಕೇಷನ್, ಕರ್ನಾಟಕ ಸರ್ಕಾರ, ಬೆಂಗಳೂರು.
14. ಸಂಯೋಜಕರು, ಐಸಿಡಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು – **ಈ ಪರಿಷ್ಕೃತ ಅಧಿಸೂಚನೆ–3ನ್ನು ಅಧ್ಯಯನ ಸಂಸ್ಥೆ/ಕೇಂದ್ರ/ಕಾಲೇಜುಗಳ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕೆಂದು ಕೋರಿದೆ.**
15. ಉಪಕುಲಸಚಿವರು/ಸಹಾಯಕ ಕುಲಸಚಿವರು(ಪರೀಕ್ಷಾಂಗ/ಶೈಕ್ಷಣಿಕ/ಅಭಿವೃದ್ಧಿ/ಸಾಮಾನ್ಯ/ಪ್ರಾಧಿಕಾರ/ಪಜಾ:ಪವ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
16. ಮಾನ್ಯ ಕುಲಪತಿಯವರ ಆಪ್ತ ಸಹಾಯಕರು– ಶೈಕ್ಷಣಿಕ ವೇಳಾಪಟ್ಟಿಯ ಪರಿಷ್ಕೃತ ಅಧಿಸೂಚನೆ–3ನ್ನು ಮಾನ್ಯ ಕುಲಪತಿಯವರ ಗಮನಕ್ಕೆ ತರುವುದು.
17. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತಸಹಾಯಕರು, ಮೈ.ವಿ.ವಿ, ಮೈಸೂರು.
18. ಅಧೀಕ್ಷಕರುಗಳು (ಪರೀಕ್ಷಾಂಗ/ಶೈಕ್ಷಣಿಕ/ಅಭಿವೃದ್ಧಿ/ಸಾಮಾನ್ಯ/ಪ್ರಾಧಿಕಾರ/ಪಜಾ:ಪವ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
19. ಎಲ್ಲಾ ಕಾರ್ಯನಿರ್ವಾಹಕರುಗಳು, ಶೈಕ್ಷಣಿಕ/ಸಾಮಾನ್ಯ/ಸಿಬ್ಬಂಧಿ, ಆಡಳಿತ ವಿಭಾಗ, ಮೈ.ವಿ.ವಿ, ಮೈಸೂರು.
20. ರಕ್ಷಾಕಡತಕ್ಕೆ.

CamScanner